# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - WEDNESDAY 5-4-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಾರ್ಚ್ 2023 ರಲ್ಲಿ ಭಾರತದ ಪಾಮೆಣ್ಣೆ ಆಮದು 28 ಶೇಕಡಾ ಹೆಚ್ಚಳ

ಮಾರ್ಚ್ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು 28 ಶೇಕಡಾ ಹೆಚ್ಚಳವಾಗಿ ಫೆಬ್ರವರಿಯ 586007 ಟನ್‌ಗಳಿಂದ 750,000 ಟನ್ ಗಳಿಗೆ ಹೆಚ್ಚಳವಾಗಿದೆಯೆಂದು ವ್ಯಾಪಾರಿಗಳ ಸರಾಸರಿ ಅಂದಾಜು. ಸೋಯಾ ಎಣ್ಣೆ ಆಮದು 27 ಶೇಕಡಾ ಇಳಿಕೆಯಾಗಿ 259,000 ಟನ್‌ಗಳಾಗಿವೆ ಹಾಗೂ ಸೂರ್ಯಕಾಂತಿ ಎಣ್ಣೆ 4 ಶೇಕಡಾ ಇಳಿಕೆಯೊಂದಿಗೆ 150,000 ಟನ್ ಗಳಾಗಿವೆಯೆನ್ನಲಾಗಿದೆ. ಅರ್ಜೆಂಟಿನಾದ ಸೋಯಾ ಎಣ್ಣೆ ಉತ್ಪಾದನೆ ಪ್ರಥಮ ಅಂದಾಜು 48 ಮಿಲಿಯನ್ ಟನ್‌ಗಳಿಂದ 25 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಬಹುದೆನ್ನಲಾಗಿದೆ. ಮೂರು ವಾರಗಳ ಗರಿಷ್ಠ ಮಟ್ಟಕ್ಕೇರಿದ್ದ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಇಂದು 1.59 ಶೇಕಡಾ ಇಳಿಕೆ (63 ರಿಂಗಿಟ್ಸ್) ದೊಂದಿಗೆ ಟನ್‌ಗೆ 3903 ರಿಂಗಿಟ್ಸ್ ($ 888.05) ಕ್ಕೆ ಇಳಿಕೆಯಾಗಿದೆ.

## ಅಕಾಲಿಕ ಮಳೆಯಿಂದ ಜೀರಿಗೆ ದರ ಮತ್ತೆ ಹೆಚ್ಚಳ ಸಾಧ್ಯತೆ

ಜೀರಿಗೆ ಬೆಳೆಯುವ ರಾಜ್ಯಗಳಾದ ರಾಜಸ್ಥಾನ, ಗುಜರಾತ್ ಗಳಲ್ಲಿ ಹಿಂದಿನ ತಿಂಗಳ ಆರಂಭದಲ್ಲಿ ಧಾರಾಕಾರ ಮಳೆಯಾಗಿತ್ತೆನ್ನಲಾಗಿದೆ. ಕಟಾವಿನ ಸಮಯದಲ್ಲಿ ಸುರಿದ ಮಳೆಯಿಂದ ಗುಣಮಟ್ಟಕ್ಕೆ ಹಾನಿಯಾಗಿ ತೇವಾಂಶ ಹೆಚ್ಚಿರುವ ಸಂಭವವಿದೆ. ಮಳೆಯಿಂದ ಜೀರಿಗೆ ಉತ್ಪಾದನೆ ಹಿಂದಿನ ಅಂದಾಜಿಗಿಂತ 10ರಿಂದ 15 ಶೇಕಡಾ ಇಳಿಕೆಯಾಗಬಹುದೆನ್ನಲಾಗಿದೆ. ಇದರಿಂದ ದರ ಹೆಚ್ಚಳವಾಗಬಹುದೆನ್ನಲಾಗಿದೆ. ದಾಸ್ತಾನು ಕಡಿಮೆಯಿದೆಯೆನ್ನಲಾಗಿದೆ.